# ರೈಲ್ವೆಗೆ 14 ಸಾವಿರ ಕೋಟಿ ರೂ. ನಷ್ಟ



**ಬೆಂಗಳೂರು:** ಕರೊನಾ ಸೋಂಕು ತಡೆಗಾಗಿ ದೇಶವ್ಯಾಪಿ ಜಾರಿಗೊಂಡ ಲಾಕ್‌ಡೌನ್‌ನಿಂದಾಗಿ ರೈಲ್ವೆ ಇಲಾಖೆಗೆ ಏಪ್ರಿಲ್ ತಿಂಗಳೊಂದರಲ್ಲೇ 14,350 ಕೋಟಿ ರೂ. ನಷ್ಟವಾಗಿದೆ. ಏಪ್ರಿಲ್ ಪೂರ್ತಿ ಯಾವುದೇ ಚಟುವಟಿಕೆ ನಡೆದಿರಲಿಲ್ಲವಾದರೂ ಅಗತ್ಯ ವಸ್ತುಗಳು, ವೈದ್ಯಕೀಯ ಪರಿಕರ ಸಾಗಣೆಯಿಂದ 4,983 ಕೋಟಿ ರೂ. ಆದಾಯ ಬಂದಿತ್ತು. ಆದರೆ ನೌಕರರ ವೇತನ, ಇನ್ನಿತರ ನಿರ್ವಹಣಾ ಕಾರ್ಯಗಳಿಗಾಗಿ 19,334 ಕೋಟಿ ರೂ. ಖರ್ಚು ಮಾಡಲಾಗಿದೆ. ವೇತನದ ಬಗ್ಗೆ ಭಯದಲ್ಲಿದ್ದ ನೌಕರರಿಗೆ ಸಂಕಷ್ಟ ಎದುರಾಗದಂತೆ ಮಾಡಲು ಇಲಾಖೆಯ ಉಳಿತಾಯ ಸೇರಿ ಇನ್ನಿತರ ಮೂಲಗಳಿಂದ ವೇತನ ಪಾವತಿಸಲಾಗಿದೆ. ರೈಲ್ವೆ ಇಲಾಖೆ ಸೇವೆಗಳನ್ನು ಸರಳಗೊಳಿಸಲು 16 ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ರಾಜ್ಯದಲ್ಲಿ ನೈಋತ್ಯ ರೈಲ್ವೆ ವಿಭಾಗ ಸೇವೆ ನೀಡುತ್ತಿದ್ದು, 582 ಕೋಟಿ ರೂ. ನಷ್ಟ ಅನುಭವಿಸಿದೆ. ಉಳಿದಂತೆ ಉತ್ತರ ರೈಲ್ವೆ ವಿಭಾಗಕ್ಕೆ 2,128 ಕೋಟಿ ರೂ., ಕೇಂದ್ರ ರೈಲ್ವೆಗೆ 1,526 ಕೋಟಿ ರೂ., ಪಶ್ಚಿಮ ವಿಭಾಗಕ್ಕೆ 1,432 ಕೋಟಿ ರೂ., ದಕ್ಷಿಣ ರೈಲ್ವೆಗೆ 1,318 ಕೋಟಿ ರೂ. ನಷ್ಟವಾಗಿದೆ.


ನಂ. 1* ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » BENGALURU
ಮಂಗಳವಾರ 4 ಆಗಸ್ಟ್ 2020
4 AUGUST 2020




# ಬಿಎಸ್‌ವೈ ಚೇತರಿಕೆಗೆ ಎಂಟಿಬಿ ಹಾರೈಕೆ

**ಬೆಂ.ಗ್ರಾಮಾಂತರ:** ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಕರೊನಾ ಪಾಸಿಟಿವ್ ಬಂದಿದ್ದು, ಶೀಘ್ರ ಗುಣಮುಖರಾಗಿ ಮತ್ತೆ ಕರ್ತವ್ಯಕ್ಕೆ ಮರಳುವಂತಾಗಲಿ ಎಂದು ವಿಧಾನ ಪರಿಷತ್ ಸದಸ್ಯ ಎಂಟಿಬಿ ನಾಗರಾಜ್ ಹಾರೈಸಿದ್ದಾರೆ.



ಈ ಬಗ್ಗೆ ಟ್ವೀಟ್ ಮಾಡಿರುವ ಎಂಟಿಬಿ, ನಮ್ಮ ನೆಚ್ಚಿನ ನಾಯಕರಾದ ಯಡಿಯೂರಪ್ಪ ಅವರಿಗೆ ಪಾಸಿಟಿವ್ ಬಂದಿರುವ ಸುದ್ದಿ ತಿಳಿದು ಬೇಸರವಾಯಿತು. ಕರೊನಾ ಸಂದರ್ಭದಲ್ಲಿ ಹಗಲಿರುಳು ರಾಜ್ಯದ ಹಿತಕ್ಕಾಗಿ ಶ್ರಮಿಸುತ್ತಿದ್ದಾರೆ. ಆದಷ್ಟು ಬೇಗ ಗುಣಮುಖರಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದು ಟ್ವಿಟ್ಟರ್ ಮೂಲಕ ತಿಳಿಸಿದ್ದಾರೆ.

ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಕರೊನಾ ಕಾಣಿಸಿಕೊಂಡಾಗಿನಿಂದ ಸೋಂಕು ನಿಯಂತ್ರಕ್ಕೆ ಮುಖ್ಯಮಂತ್ರಿ ಅವರು ಶಕ್ತಿಮೀರಿ ಶ್ರಮಿಸುತ್ತಿದ್ದಾರೆ. ಎಲ್ಲರ ವಿಶ್ವಾಸಗಳಿಸಿ ಎಲ್ಲ ಇಲಾಖೆ ಅಧಿಕಾರಿಗಳ ಸಮನ್ವಯದೊಂದಿಗೆ ಹಗಲಿರುಳು ಹೋರಾಟ ನಡೆಸುತ್ತಿದ್ದಾರೆ. ಅವರಿಗೆ ಕರೊನಾ ಲಕ್ಷಣಗಳಿಲ್ಲ. ಆದರೂ ವೈದ್ಯರ ಸಲಹೆ ಮೇರೆಗೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಚಿಕಿತ್ಸೆಗೆ ಸ್ಪಂದಿಸಿ ಶೀಘ್ರ ಗುಣಮುಖರಾಗಿ ಕರ್ತವ್ಯಕ್ಕೆ ಮರಳುವಂತಾಗಲಿ. ಕರೊನಾದಂತಹ ಸಂದರ್ಭದಲ್ಲಿ ನಮ್ಮ ನೆಚ್ಚಿನ ನಾಯಕ ಬಿಎಸ್‌ವೈ ಆಡಳಿತ ಅವಶ್ಯವಾಗಿದೆ ಎಂದು ಹೇಳಿದ್ದಾರೆ.

# ಆತಂಕ ಬೇಡ, ನಾನು ಕ್ಷೇಮ

ಮೊದಲನೆ ಪುಟದಿಂದ...

ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕ ಇಟ್ಟುಕೊಂಡು, ಅಗತ್ಯ ಸೂಚನೆಗಳನ್ನು ನೀಡುತ್ತಿದ್ದೇನೆ' ಎಂದು ಸಿಎಂ ಹೇಳಿದ್ದಾರೆ.

**ಸಿಎಂ ನಿವಾಸದ 6 ಸಿಬ್ಬಂದಿಗೆ ಸೋಂಕು:** ಮುಖ್ಯಮಂತ್ರಿಗಳ ಗನ್‌ಮ್ಯಾನ್, ಚಾಲಕ, ಕಾವೇರಿ ನಿವಾಸದ ಭದ್ರತಾ ಸಿಬ್ಬಂದಿ, ಅಡುಗೆ ಕೆಲಸದವರು ಸೇರಿ 6 ಜನರಿಗೆ ಕರೊನಾ ಸೋಂಕು ದೃಢಪಟ್ಟಿದೆ. ಇವರನ್ನು ಅಂತಾರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರ (ಬಿಐಇಸಿ)ದ ಕರೊನಾ ಆರೈಕೆ ಕೇಂದ್ರದಲ್ಲಿ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿದೆ. ಬಹುತೇಕರಿಗೆ ಸೋಂಕಿನ ಲಕ್ಷಣ ಕಂಡುಬಂದಿಲ್ಲ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ. ಯಡಿಯೂರಪ್ಪ ಅವರಿಗೆ ಸೋಂಕು ದೃಢಪಟ್ಟ ಹಿನ್ನೆಲೆಯಲ್ಲಿ ಸಿಎಂ ಗೃಹ ಕಚೇರಿ ಕೃಷ್ಣಾ, ಅಧಿಕೃತ ನಿವಾಸ ಕಾವೇರಿ ಮತ್ತು ಡಾಲರ್ಸ್ ಕಾಲನಿಯಲ್ಲಿರುವ ಧವಳಗಿರಿ ಕಟ್ಟಡಗಳಿಗೆ ಸೋಂಕು ನಿವಾರಕ ದ್ರಾವಣ (ಸ್ಯಾನಿಟೈಸ್) ಸಿಂಪಡಿಸಲಾಗಿದೆ. ಎಲ್ಲರಿಗೂ ತಪಾಸಣೆ: ಸಿಎಂ ಗೃಹ ಕಚೇರಿ ಹಾಗೂ ಕಾವೇರಿ ನಿವಾಸದಲ್ಲಿ ನಿರಂತರ ಸಭೆ, ಔಪಚಾರಿಕ ಮಾತುಕತೆ ಮುಂತಾದ ಬಿಡುವಿಲ್ಲದ ಕಾರ್ಯಚಟುವಟಿಕೆಗಳು ನಡೆದಿವೆ. ಹೀಗಾಗಿ ಸಿಎಂ ಕುಟುಂಬ ಸದಸ್ಯರು ಸೇರಿ ಎಲ್ಲರಿಗೂ ಕರೊನಾ ತಪಾಸಣೆ ಮಾಡಲು ನಿರ್ಧರಿಸಲಾಗಿದ್ದು, 50ಕ್ಕೂ ಹೆಚ್ಚು ಜನರ ಗಂಟಲು ದ್ರವ ಸಂಗ್ರಹಿಸಲಾಗಿದೆ. ರಜೆ ಮೇಲೆ ತೆರಳಿರುವ ಸಿಬ್ಬಂದಿಗೂ ಪರೀಕ್ಷೆಗೆ ಸೂಚನೆ ನೀಡಲಾಗಿದೆ.

# ಪಿಯುಸಿಯಲ್ಲಿ ವಿದ್ಯಾರ್ಥಿ ಸಾಧನೆ

■ ವಿಜಯವಾಣಿ ಸುದ್ದಿಜಾಲ ಆನೇಕಲ್



**ಐಎಸ್‌ಸಿ 12ನೇ ತರಗತಿ (ಪಿಯುಸಿ) ಪರೀಕ್ಷೆಯಲ್ಲಿ ಹುಲ್ಲಹಳ್ಳಿ ಕ್ರೈಸ್ಟ್ ಅಕಾಡೆಮಿ ಜೂನಿಯರ್ ಕಾಲೇಜಿನ ವಿದ್ಯಾರ್ಥಿ, ಚಂದಾಪುರದ ಸಿ.ವಿ.ಬದ್ರಿನಾರಾಯಣ ಐಎಸ್‌ಸಿ ವಿಭಾಗದಲ್ಲಿ 400ಕ್ಕೆ 380 ಅಂಕಗಳನ್ನು (ಶೇ.95) ಪಡೆದಿದ್ದಾರೆ. ಕಂಪ್ಯೂಟರ್ ಅಪ್ಲಿಕೇಷನ್ ವಿಷಯದಲ್ಲಿ 97 ಅಂಕ, ರಸಾಯನ ವಿಜ್ಞಾನ 96, ಗಣಿತ 94, ಭೌತಶಾಸ್ತ್ರ ವಿಜ್ಞಾನ 92, ಇಂಗ್ಲಿಷ್‌ನಲ್ಲಿ 93 ಅಂಕ ಪಡೆದಿದ್ದಾನೆ.**

# ಕರೊನಾದಿಂದ ಶೈಕ್ಷಣಿಕ ಪ್ರಗತಿಗೆ ಪೆಟ್ಟು

■ ವಿಜಯವಾಣಿ ಸುದ್ದಿಜಾಲ ಸೂಲಿಬೆಲೆ

ಕರೊನಾ ವಿಶ್ವವನ್ನೆ ಭಾಧಿಸುತ್ತಿರುವ ಪರಿಣಾಮ ಪ್ರಸಕ್ತ ಸಾಲಿನ ಶೈಕ್ಷಣಿಕ ಪ್ರಗತಿಗೆ ಬಾರಿ ಪೆಟ್ಟು ಬಿದ್ದಿದೆ ಎಂದು ಮುಖ್ಯಶಿಕ್ಷಕಿ ಬನಶಂಕರಮ್ಮ ತಿಳಿಸಿದರು.

ಜಡಿಗೇನಹಳ್ಳಿ ಪ್ರಾಥಮಿಕ ಶಾಲೆ ಆವರಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸರ್ಕಾರ ಶಾಲೆ ಪ್ರಾರಂಭದ ದಿನಗಳಲ್ಲೆ ಪಠ್ಯಪುಸ್ತಕಗಳನ್ನು ವಿತರಣೆ ಮಾಡಲು ಸಕಲ ಸಿದ್ಧತೆಗಳನ್ನು ಮಾಡಿಕೊಂಡಿರುವ ಬೆನ್ನಲ್ಲೆ ಕರೊನಾ ಆವರಿಸಿ ದೇಶದ ಪ್ರಗತಿಯ ಜತೆಗೆ ಶೈಕ್ಷಣಿಕ ಪ್ರಗತಿಗೂ ಬಾರಿ ಪೆಟ್ಟುಬಿದ್ದಿದೆ. ಆದ್ದರಿಂದ ಶಾಲೆ ಪ್ರಾರಂಭ ಮಾಡದಿದ್ದರೂ ಸರ್ಕಾರದ ಆದೇಶದಂತೆ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ವಿತರಣೆ ಮಾಡಲಾಗುತ್ತಿದೆ ಎಂದರು.

ಸಿಆರ್‌ಪಿ ವೆಂಕಟಲಕ್ಷ್ಮಮ್ಮ ಮಾತನಾಡಿ, ವಿದ್ಯಾರ್ಥಿಗಳು ಪುಸ್ತಕಗಳನ್ನು ಪಡೆದು ಮನೆಯಲ್ಲಿಯೇ ಅಭ್ಯಾಸ ಮಾಡಬೇಕು. ಸರ್ಕಾರದ ಆದೇಶ ಬಂದ ನಂತರ ಶಾಲೆಗಳನ್ನು ತೆರೆದು ನಿರಂತರವಾಗಿ ಪಠ್ಯಗಳಿಗೆ ಚಾಲನೆ ನೀಡಲಾಗುವುದು ಎಂದರು. ಸಹ ಶಿಕ್ಷಕಿಯರಾದ ಪುನಿತಾ ನಟರಾಜ್, ಸೌಮ್ಯಾ, ಅಶ್ವಿನಿ, ಪಾಲಕರಾದ ಜೆ.ಎಂ.ನಾಗರಾಜ್ ಮತ್ತಿತರರಿದ್ದರು.



ವಿಜಯವಾಣಿ ಚಿತ್ರ

ಹೊಸಕೋಟೆ ತಾಲೂಕಿನ ಜಡಿಗೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ಸಿಆರ್‌ಪಿ ವೆಂಕಟಲಕ್ಷ್ಮಮ್ಮ, ಮುಖ್ಯಶಿಕ್ಷಕಿ ಬನಶಂಕರಮ್ಮ ವಿತರಿಸಿದರು.

# ನಾಳೆ ದೇವಾಲಯಗಳಲ್ಲಿ ವಿಶೇಷ ಪೂಜೆ

» 5 ರಂದು ಶಿಲಾನ್ಯಾಸ

**ವಿಜಯಪುರ:** ರಾಮಮಂದಿರ ನಿರ್ಮಾಣ ಕಾರ್ಯ ಆ.5 ರಂದು ನೆರವೇರಲಿದ್ದು, ಅಂದು ಪ್ರತಿಯೊಬ್ಬರೂ ಮನೆಗಳಲ್ಲಿ ಹಾಗೂ ದೇವಾಲಯಗಳಲ್ಲಿ ದೀಪ ಹಚ್ಚುವ ಮೂಲಕ ವಿಶೇಷ ಪೂಜೆ ನೆರವೇರಿಸಬೇಕು ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಎ.ವಿ. ನಾರಾಯಣಸ್ವಾಮಿ ತಿಳಿಸಿದರು.

5 ರಂದು ಶಿಲಾನ್ಯಾಸ ನೆರವೇರಲಿದ್ದು, ಪ್ರತಿಯೊಬ್ಬ ಭಾರತೀಯ ಪ್ರಜೆಯೂ ಇದರಲ್ಲಿ ಕೈಜೋಡಿಸಬೇಕು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಜಗತ್ತಿನಲ್ಲಿಯೇ ಭವ್ಯವಾದ ರಾಮಮಂದಿರ ದೇವಾಲಯ ನಿರ್ಮಾಣ ಕಾರ್ಯವು ಯಶಸ್ವಿಯಾಗಲು ಧರ್ಮಾತೀತವಾಗಿ ಪ್ರೋತ್ಸಾಹಿಸಬೇಕಿದೆ ಎಂದರು. ತಾಲೂಕು ಬಿಜೆಪಿ ಅಧ್ಯಕ್ಷ ಸುನಿಲ್‌ಸುಂದರೇಶ್ ಮಾತನಾಡಿ, ರಾಷ್ಟ್ರೋತ್ಥಾನ ಪರಿಷತ್ತಿನ ಸಹಯೋಗದಲ್ಲಿ ಆ.7 ರಂದು ದೇವನಹಳ್ಳಿಯ ಗುರುಭವನದಲ್ಲಿ ರಕ್ತದಾನ ಶಿಬಿರ ಏರ್ಪಡಿಸಲಾಗಿದೆ ಎಂದರು. ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಕೆ.ನಾಗೇಶ್ ಮಾತನಾಡಿ, ಆ.5 ರಂದೇ ಇಡೀ ದೇಶದಲ್ಲಿ ಶ್ರೀರಾಮನವಮಿ, ಹನುಮಜಯಂತಿ ಎಂದು ಭಾವಿಸಿ ಅದ್ದೂರಿಯಾಗಿ ಆಚರಿಸಲು ಸಿದ್ಧತೆ ನಡೆದಿದೆ ಎಂದರು.

ರಾಜ್ಯಪರಿಷತ್ತಿನ ಸದಸ್ಯ ದೇ.ಸು.ನಾಗರಾಜು, ಟೌನ್ ಬಿಜೆಪಿ ಅಧ್ಯಕ್ಷ ಚ.ವಿಜಯಬಾಬು, ಜಿಲ್ಲಾ ಬಿಜೆಪಿ ಪ್ರಧಾನಕಾರ್ಯದರ್ಶಿ ಶಿವಪ್ರಸಾದ್, ಜಿಲ್ಲಾ ಬಿಜೆಪಿ ಒಬಿಸಿ ಮೋರ್ಚಾ ಅಧ್ಯಕ್ಷ ನಾರಾಯಣಸ್ವಾಮಿ, ತಾಲೂಕು ಬಿಜೆಪಿ ಪ್ರಧಾನಕಾರ್ಯದರ್ಶಿ ರವಿಕುಮಾರ್, ಬಿಜೆಪಿ ಯುವಮೋರ್ಚಾ ಅಧ್ಯಕ್ಷ ಮೋಹನ್, ಒಬಿಸಿ ತಾಲೂಕು ಮೋರ್ಚಾ ಅಧ್ಯಕ್ಷ ವಿನಯ್ ಇದ್ದರು.


## ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

**ಟೆಂಡರ್‌ಗಾಗಿ ಆಹ್ವಾನ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)**

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ

| ಕ್ರ ಸಂ. | ವಿಭಾಗ | ಐಎಫ್‌ಟಿ ಸಂಖ್ಯೆ | ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.) | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ | ಟೆಂಡರ್ ತೆರೆಯುವ ದಿನಾಂಕ |
|---|---|---|---|---|---|
| ಮುಖ್ಯ ಅಭಿಯಂತರರ ಕಚೇರಿ (ಪೂರ್ವ),7ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560009. | | | | | |
| 1 | ಪೂರ್ವ-1 | ಬೆಂಜಮಂ/ಕಾನಿಅ(ಪೂರ್ವ)-1/ಪಿಬಿ/775/ 2020-21. ದಿನಾಂಕ: 27.07.2020. (5ನೇ ಕರೆ) ಐಟಂವಾರು ಟೆಂಡರ್ | 35,66,817/- <br> 71,350/- | 10.08.2020 ರ ಸಂಜೆ 04:00 ಗಂಟೆಯವರೆಗೆ | 12.08.2020 ರ ಸಂಜೆ 05:00 ಗಂಟೆಯ ನಂತರ |
| ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, (ಪೂರ್ವ-1) | | | | | |
| ಮುಖ್ಯ ಅಭಿಯಂತರರ ಕಚೇರಿ (ವಿನ್ಯಾಸ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560009. | | | | | |
| 2 | ಗುಣ ಆಶ್ವಾಸನೆ | ಬೆಂಜಮಂ/ಇಕ್ಯೂಎಟಿಇ/ಜೆಇ/01/2020/ 377/2020-21. ದಿನಾಂಕ: 28.07.2020. (2ನೇ ಕರೆ) (ದ್ವಿ-ಲಕೋಟೆ ಪದ್ಧತಿ) | 57,82,000/- <br> 1,15,640/- | 01.09.2020 ರ ಸಂಜೆ 04:00 ಗಂಟೆಯವರೆಗೆ | 03.09.2020 ರ ಮಧ್ಯಾಹ್ನ 03:00 ಗಂಟೆಗೆ |
| ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, (ಗು.ಆ.) | | | | | |
| 3 | ಕೇಂದ್ರ ಉಗ್ರಾಣ & ಕ.ವಾ.-ನಿ | ಬೆಂಜಮಂ/ಕಾನಿಅ(ಕೇಂ.ಉಗ್ರಾಣ&ಕ.ವಾ.-ನಿ) ವಿ/ಸಅ/ಪಿಬಿ/ಕ.ವಾ.-ನಿ/851/2020-21. ದಿನಾಂಕ: 29.07.2020. | 23,97,991/- <br> 59,950/- | 20.08.2020 ರ ಸಂಜೆ 04:00 ಗಂಟೆಯವರೆಗೆ | 24.08.2020 ರ ಮಧ್ಯಾಹ್ನ 12:00 ಗಂಟೆಗೆ |
| 4 | | | 18,49,164/- <br> 46,229/- | | |
| ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, (ಕೇಂದ್ರ ಉಗ್ರಾಣ &ಕ.ವಾ.-ನಿ) | | | | | |
| ಮುಖ್ಯ ಅಭಿಯಂತರರ ಕಚೇರಿ (ತ್ಯಾಜ್ಯ ನೀರು ನಿರ್ವಹಣೆ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560009. | | | | | |
| 5 | ತ್ಯಾ.ನೀ.ನಿ. -ಹೆಚ್ | ಬೆಂಜಮಂ/ಕಾನಿಅ(ತ್ಯಾ.ನೀ.ನಿ.)-ಹೆಚ್/ಪಿಬಿ-2/ 399/2020-21. ದಿನಾಂಕ: 23.07.2020. | 27.56 ಲಕ್ಷಗಳು <br> 56,000/- | 18.08.2020 ರ ಸಂಜೆ 5:30 ಗಂಟೆಯವರೆಗೆ | 20.08.2020 ರ ಮಧ್ಯಾಹ್ನ 12:00 ಗಂಟೆಗೆ |
| 6 | ತ್ಯಾ.ನೀ.ನಿ. -ಹೆಚ್ | ಬೆಂಜಮಂ/ಕಾನಿಅ(ತ್ಯಾ.ನೀ.ನಿ.)-ಹೆಚ್/ಪಿಬಿ-2/ 403/2020-21. ದಿನಾಂಕ: 23.07.2020. (ದ್ವಿ-ಲಕೋಟೆ ಪದ್ಧತಿ) | 65.55 ಲಕ್ಷಗಳು <br> 1.31 ಲಕ್ಷ | 18.08.2020 ರ ಸಂಜೆ 5:30 ಗಂಟೆಯವರೆಗೆ | 20.08.2020 ರ ಮಧ್ಯಾಹ್ನ 12:00 ಗಂಟೆಗೆ |
| 7 | ತ್ಯಾ.ನೀ.ನಿ. -ಹೆಚ್ | ಬೆಂಜಮಂ/ಕಾನಿಅ(ತ್ಯಾ.ನೀ.ನಿ.)-ಹೆಚ್/ಪಿಬಿ-2/ 401/2020-21. ದಿನಾಂಕ: 23.07.2020. (ದ್ವಿ-ಲಕೋಟೆ ಪದ್ಧತಿ) | 93.51 ಲಕ್ಷಗಳು <br> 1.87 ಲಕ್ಷ | 18.08.2020 ರ ಸಂಜೆ 5:30 ಗಂಟೆಯವರೆಗೆ | 20.08.2020 ರ ಮಧ್ಯಾಹ್ನ 12:00 ಗಂಟೆಗೆ |
| ಸಹಿ/- ಕಾರ್ಯನಿರ್ವಾಹಕ ಅಭಿಯಂತರು, (ತ್ಯಾ.ನೀ.ನಿ.-ಹೆಚ್) | | | | | |

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು https://eproc.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯಲ್ಲಿ ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.






## ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಘ.ಬ.ದಂ.ಕಾ.ನಿ. ವಿಭಾಗ-4, ಚಿಕ್ಕೋಡಿ. ಫೋನ ನಂ: 08338 - 272485 ಫ್ಯಾಕ್ಸ ನಂ: 08338 - 275186

ಟೆಂಡರ ಪ್ರಕಟಣೆ ಸಂಖ್ಯೆ : KNNL/GRBCC -4/Tender/2020-21/11 Date:-03-08-2020

**ಅಲ್ಪಾವಧಿ ಟೆಂಡರ ಪ್ರಕಟಣೆ (ಇ-ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)**

ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರಮೆಂಟ-ಪೋರ್ಟಾ ಲ್‌ನಲ್ಲಿ (http://eproc.karnataka. gov.in) 4701 ಅಡಿಯಲ್ಲಿನ ದತ್ತವಾಡ ಕಾಲುವೆ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಸರ್ವೆ ಕಲ್ಲನ್ನಿ ಕಾಮಗಾರಿಗೆ ಮೇಲ್ಕಾಣಿಸಿದ ಪ್ರಕಟಣೆಯಲ್ಲಿ ಅರ್ಹ ಗುತ್ತಿಗೆದಾರರಿಗೆ ಟೆಂಡರಗಳನ್ನು ಕರೆಯಲಾಗಿರುತ್ತದೆ. ವಿವರ :

| | |
|---|---|
| ಇ-ಪ್ರೊಕ್ಯೂರಮೆಂಟ ಇಂಡೆಂಟ ಸಂಖ್ಯೆ | Two Cover System: Indent No: 30020 |
| ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ ಮೊತ್ತ ರೂ. | 85.67 lakhs |
| ಟೆಂಡರಿಗೆ ಇಡಲಾದ ಇಎಂಡಿ ಮೊತ್ತ ರೂ. | 86,000/- |
| ಟೆಂಡರ ಕುರಿತ ಪ್ರಶ್ನೆಗಳಿಗಾಗಿ / ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ & ಸಮಯ | 10-08-2020, Up to 17.00 hrs. |
| ಭರ್ತಿ ಮಾಡಿದ ಟೆಂಡರಗಳನ್ನು ಇ-ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ & ಸಮಯ | 11-08-2020 Up to 16.00 hrs. |
| ತಾಂತ್ರಿಕ ಬಿಡ್‌ನ್ನು (ಲಕೋಟೆ-1) ತೆರೆಯುವ ದಿನಾಂಕ | 13-08-2020 at 11.00 hrs. |
| ತಾಂತ್ರಿಕ ಬಿಡ್‌ನಲ್ಲಿ (ಲಕೋಟೆ-1) ಪೂರ್ವಾಹತೆ ಹೊಂದಿದ ಅರ್ಹ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು (ಲಕೋಟೆ-2) ತೆರೆಯುವ ದಿನಾಂಕ | ತಾಂತ್ರಿಕ ಬಿಡ್‌ಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ. |

ಕಾಮಗಾರಿಗಳ ಹೆಸರು/ಗುತ್ತಿಗೆದಾರರ ಅರ್ಹತೆ/ ಟೆಂಡರಿನ ನಿಯಮು/ ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ http://www. eproc. karnata ka.gov.in ಮೂಲಕ ಮಾಹಿತಿ ಪಡೆಯ ಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರು, ಕನೀನಿನಿ, ಘಬದಂಕಾನಿ ವಿಭಾಗ-4, ಚಿಕ್ಕೋಡಿ.



## COFFEE DAY ENTERPRISES LIMITED

CIN No: L55101KA2008PLC046866
Regd. Off: 23/2, Coffee Day Square, Vittal Mallya Road, Bangalore-560001
Ph.No:080 40012345 Fax No: 080 40012987
Website: www.coffeeday.com
Email ID: investors@coffeeday.com

**NOTICE**

Pursuant to Regulation 47(1)(a) of the Securities and Exchange Board of India (Listing Obligations & Disclosure Requirements) Regulations, 2015, Notice is hereby given that a Meeting of Board of Directors of the Company is scheduled to be held on Monday, August 10th, 2020, to inter-alia consider, approve and take on record the Un-Audited Standalone & Consolidated Financial results of the Company for the Quarter ended September 30th 2019 & December 31st 2019.

For Coffee Day Enterprises Limited
Sd/-
Sadananda Poojary
Company Secretary &
Compliance Officer

Place : Bangalore
Date : 4 August, 2020



ಕರ್ನಾಟಕ ಸರ್ಕಾರ

## ಸಮಾಜ ಕಲ್ಯಾಣ ಇಲಾಖೆ

ಆಯುಕ್ತರವರ ಕಛೇರಿ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ|| ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು - 560 001.
ದೂರವಾಣಿ : 080 - 22253783, 22254071

ಸಂಖ್ಯೆ : ಸಕನಿ/ಇಡಿ-4/ಸಿಆರ್-06/2020-21 ಬೆಂಗಳೂರು, ದಿನಾಂಕ : 31.07.2020

**ಇ-ಟೆಂಡರ್ ಪ್ರಕಟಣೆ**

ಸಮಾಜ ಕಲ್ಯಾಣ ಇಲಾಖೆಯಿಂದ ನಿರ್ವಹಿಸುತ್ತಿರುವ ಸರ್ಕಾರಿ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಸೋಲಾರ್ ವಾಟರ್ ಹೀಟರ್‌ಗಳನ್ನು ಖರೀದಿಸಲು ಅರ್ಹ ಉತ್ಪಾದಕರುಗಳಿಂದ ಇ-ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ದಸ್ತಾವೇಜು ವಿವರಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ (ವಿಳಾಸ: https://eproc.karnataka.gov.in) ಇಂದ ದಿನಾಂಕ: 31.07.2020 ರಿಂದ ಪಡೆಯಬಹುದಾಗಿದೆ. ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ ಮತ್ತು ಸಮಯ ದಿನಾಂಕ 14.08.2020 ಮಧ್ಯಾಹ್ನ 3.00 ಗಂಟೆ.

ಸಹಿ/-
ಜಂಟಿ ನಿರ್ದೇಶಕರು (ಶಿಕ್ಷಣ)
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು

DIPR/DDU/708/2020-21



## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರವರ ಕಛೇರಿ, ಬಿಬಿಎಂಪಿ ಕೇಂದ್ರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು-560002

ಸಂಖ್ಯೆ: ಸ.ಆ(ನೇ&ವಿ)/ಪಿಆರ್/108/2020-21 ದಿನಾಂಕ: 03.08.2020

**ಪ್ರಕಟಣೆ**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕರೋನಾ ವೈರಸ್‌ನ (ಕೋವಿಡ್-19) ನಿಯಂತ್ರಣಕ್ಕೆ ಅವಶ್ಯವಿರುವ ಹೆಚ್ಚುವರಿ ಮಾನವ ಸಂಪನ್ಮೂಲವನ್ನು ತಾತ್ಕಾಲಿಕವಾಗಿ 06 ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ವಾಕ್-ಇನ್-ಪ್ರಕ್ರಿಯೆ ಮೂಲಕ ಕೋವಿಡ್ ಶಂಕಿತ ರೋಗಿಗಳನ್ನು ಕರೆದೊಯ್ಯುವ 100 ಬಿಎಲ್‌ಎಸ್ ಅಂಬ್ಯುಲೆನ್ಸ್‌ಗಳಲ್ಲಿ ಪ್ಯಾರಾ ಮೆಡಿಕಲ್ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ವಾಕ್-ಇನ್-ಪ್ರಕ್ರಿಯೆ**

| ಕ್ರ. ಸಂ. | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ | ವೇತನ |
|---|---|---|---|---|
| 1 | ಪ್ಯಾರಾ ಮೆಡಿಕಲ್ ಸಿಬ್ಬಂದಿಗಳು | 100 | ಕರ್ನಾಟಕ ಪ್ಯಾರಾಮೆಡಿಕಲ್ ಬೋರ್ಡ್‌ನಿಂದ ಅಂಗೀಕೃತ ಸ್ಟಾಫ್ ನರ್ಸ್ / ಲ್ಯಾಬ್ ಟೆಕ್ನಿಷಿಯನ್ / ಫಾರ್ಮಸಿಸ್ಟ್ / ಎಎನ್‌ಎಂ / ಕಿರಿಯ ಪುರುಷ ಆರೋಗ್ಯ ಸಹಾಯಕ ಕೋರ್ಸ್‌ಗಳು | ರೂ.15,000/- + ರೂ.5,000/- (ಕೋವಿಡ್ ಭತ್ಯೆ) = ರೂ.20,000/- |

**ಅರ್ಹತೆ**

1. ವಯಸ್ಸು: ಅಧಿಸೂಚನೆ ಹೊರಡಿಸಿದ ದಿನಾಂಕಕ್ಕೆ 50 ವರ್ಷಗಳನ್ನು ಮೀರಿರಬಾರದು.
2. ಕನ್ನಡ ಭಾಷೆ ಮಾತನಾಡಲು, ಓದಲು, ಬರೆಯಲು ಬರಬೇಕು.

ದಿನಾಂಕ : 04.08.2020 ರಿಂದ 06.08.2020
ಸ್ಥಳ : ಸರ್ ಪುಟ್ಟಣಚೆಟ್ಟಿ ಟೌನ್ ಹಾಲ್, ಬೆಂಗಳೂರು
ಸಮಯ : ಬೆಳಿಗ್ಗೆ 10:30 ರಿಂದ ಸಂಜೆ 5:30

ಆಸಕ್ತರು ಸಂಬಂಧಿಸಿದ ದಾಖಲೆಗಳೊಂದಿಗೆ ಅಭ್ಯರ್ಥಿಗಳು ಪಟ್ಟಿಯಲ್ಲಿ ಸೂಚಿಸಿರುವ ಸ್ಥಳ ಮತ್ತು ದಿನಾಂಕದಂದು ವಾಕ್‌ಇನ್ ಪ್ರಕ್ರಿಯೆಗೆ ಹಾಜರಾಗಲು ಸೂಚಿಸಲಾಗಿದೆ. ಮೇಲ್ಕಂಡ ಹುದ್ದೆಗಳ ಸಂಖ್ಯೆಗಳನ್ನು ಹೆಚ್ಚಿಸುವ / ಕಡಿತಗೊಳಿಸುವ ಅಧಿಕಾರವನ್ನು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರು ಹೊಂದಿರುತ್ತಾರೆ.

ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ: 080-22975563 ಇ-ಮೇಲ್ ಐ.ಡಿ: bbmpacrecruitment@gmail.com ಮತ್ತು ಪಾಲಿಕೆಯ ವೆಬ್‌ಸೈಟ್ www.bbmp.gov.in ಅನ್ನು ಸಂಪರ್ಕಿಸಲು ಸೂಚಿಸಲಾಗಿದೆ.

ಸಹಿ/-
ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನಾವೆಲ್ಲರೂ ಒಟ್ಟಾಗಿ ಕೊರೊನಾ ವೈರಸ್ ವಿರುದ್ಧ ಹೋರಾಡೋಣ,
ರೋಗ ಹರಡದಂತೆ ಎಲ್ಲರೂ ಜಾಗೃತೆವಹಿಸೋಣ

ಕಡ್ಡಾಯವಾಗಿ ಮಾಸ್ಕ್ ಧರಿಸೋಣ | ಸಾಮಾಜಿಕ ಅಂತರ ಪಾಲಿಸೋಣ | ಸ್ಯಾನಿಟೈಸರ್ ಬಳಸೋಣ | ಸಾಬೂನಿನಿಂದ ಆಗಾಗ ಕೈತೊಳೆಯೋಣ | ಮನೆಯಲ್ಲಿ ಸುರಕ್ಷಿತವಾಗಿರೋಣ

ಸಂದರ್ಶನದಲ್ಲಿ ಪಾಲ್ಗೊಳ್ಳುವವರು ಮಾಸ್ಕ್ ಧರಿಸಿ, ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು.



## ಪುರಸಭೆ ಕಾರ್ಯಾಲಯ ಅಥಣಿ

ತಾ::ಅಥಣಿ (STD 08289 251137) ಜಿ::ಬೆಳಗಾವಿ
Website:www.athanitown.mrc.gov.in E-Mail:itstaff_ulb_athani@yahoo.co.in

ಕ್ರಮ ಸಂಖ್ಯೆ:ಪುಸಅ:ಕಾಮಗಾರಿ:ಟೆಂಡರ:ಐಡಿಎಸ್ಎಂಟಿ:2020-21 ದಿನಾಂಕ 30-07-2020

**|| ಟೆಂಡರ ಪ್ರಕಟಣೆ||**
**||ಇ-ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ||**
**(ಕರ್ನಾಟಕ ಪಾರದರ್ಶಕ ಅಧಿನಿಯಮ 2000 ರನ್ವಯ)**

ಅಥಣಿ ಪುರಸಭೆ ವ್ಯಾಪ್ತಿಯಲ್ಲಿ ಸನ್ 2020-21ನೇ ಸಾಲಿನ ಐ.ಡಿ.ಎಸ್.ಎಂ.ಟಿ ರಿಜನರೇಟೆಡ್ ಫಂಡಿನ ಅನುದಾನದಡಿಯಲ್ಲಿ ಈ ಕೆಳಗೆ ವಿವರಿಸಿದ ಕಾಮಗಾರಿಗೆ ಲೋಕೋಪಯೋಗಿ/ಪಂಚಾಯತ ರಾಜ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಸಿವ್ಹಿಲ್ ಗುತ್ತಿಗೆದಾರರಿಂದ ಕೆ.ಡಬ್ಲೂ-3ರ ಪ್ರಕಾರ ಟೆಂಡರನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಗುತ್ತಿಗೆದಾರರು ಇ-ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ ಟೆಂಡರ ಸಲ್ಲಿಸಬಹುದು. ಕಾಮಗಾರಿಯ ವಿವರ ಈ ಕೆಳಗಿನಂತಿದೆ.

ಅ.ನಂ:1:ಕಾಮಗಾರಿ ಇಂಡೆಂಟ್ ನಂ.:DMA/2020-21/BD/WORK_INDENT104424,ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):70.00, ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):140000.

ಟೆಂಡರ ಫಾರ್ಮ ವೆಬ್ ಸೈಟಿನಿಂದ ಡೌನ್ ಲೋಡ ಮಾಡಿಕೊಳ್ಳುವ ಪ್ರಾರಂಭದ ದಿನಾಂಕ:05-08-2020, ಭರ್ತಿ ಮಾಡಿದ ಟೆಂಡರಗಳನ್ನು ಅಪಲೋಡ್ (Upload) ಮಾಡುವ ಕೊನೆಯ ದಿನಾಂಕ:07-09-2020 ಸಾಯಂಕಾಲ: 4:00 ಘಂಟೆವರೆಗೆ, ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 09-09-2020ರ ಸಾಯಂಕಾಲ: 5:00 ಘಂಟೆಯ ನಂತರ, ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ:14-09-2020ರ ಸಾಯಂಕಾಲ:5:00 ಘಂಟೆಯ ನಂತರ, ಹೆಚ್ಚಿನ ಮಾಹಿತಿಗಾಗಿ Website:www.athanitown.mrc.gov.in & www.eproc.karnataka.gov.in ವೆಬ್‌ಸೈಟನಲ್ಲಿ ನೋಡಬಹ್ಮದು

ಸಹಿ/-
(ಎಂ.ಎಸ್.ಕವಲಾಪೂರ)
ಮುಖ್ಯಾಧಿಕಾರಿ
ಪುರಸಭೆ ಅಥಣಿ

ಸಹಿ/-
(ರವೀಂದ್ರ ಕರಲಿಂಗಣ್ಣವರ ಕೆಎಎಸ್)
ಆಡಳಿತಾಧಿಕಾರಿಗಳು
ಪುರಸಭೆ ಅಥಣಿ ಹಾಗೂ
ಉಪವಿಭಾಗಾಧಿಕಾರಿಗಳು ಚಿಕ್ಕೋಡಿ

DIPR/BGM/RO-NO-375/MCA/2020-21


